# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : **136**
ಸದಸ್ಯರ ಹೆಸರು : ಶ್ರೀ ಹೆಚ್.ಎಸ್.ಗೋಪಿನಾಥ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)
ಉತ್ತರಿಸುವ ದಿನಾಂಕ : **05.07.2023**
ಉತ್ತರಿಸುವ ಸಚಿವರು : ಕಂದಾಯ ಸಚಿವರು

| ಕ್ರ ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಬೆಂಗಳೂರು ಜಿಲ್ಲೆಯಲ್ಲಿ ಎಷ್ಟು ಹೆಕ್ಟೇರ್ ಸರ್ಕಾರಿ ಬೀಳು ಜಮೀನು ಇದೆ; (ವಿವರ ನೀಡುವುದು) | ಬೆಂಗಳೂರು ನಗರ ಜಿಲ್ಲಾ ವ್ಯಾಪ್ತಿಯಲ್ಲಿನ ಸರ್ಕಾರಿ ಬೀಳು ಜಮೀನಿನ ವಿವರಗಳು ಈ ಕೆಳಕಂಡಂತಿವೆ:- (ಕೆಳಗಿನ ಕೋಷ್ಟಕ ನೋಡಿ) |
| ಆ) | ಸದರಿ ಸರ್ಕಾರಿ ಬೀಳು ಜಮೀನು ಆರ್.ಟಿ.ಸಿ.ಯಲ್ಲಿ ನಮೂದಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಬಂದಿದೆ. |
| ಇ) | ಬಂದಿದ್ದಲ್ಲಿ, ಈ ಜಮೀನನ್ನು ಅನುಭವದಾರನ/ಮಾಲೀಕರ ಹೆಸರಿಗೆ ಆರ್.ಟಿ.ಸಿ. ತಿದ್ದುಪಡಿ ಮಾಡಲು ಸರ್ಕಾರಕ್ಕಿರುವ ಅಡೆತಡೆಗಳೇನು; | ಸರ್ಕಾರಿ ಜಮೀನುಗಳನ್ನು ಸಾಗುವಳಿ ಮಾಡಲು ಮಂಜೂರು ಮಾಡಿರುವಂತಹ ಅನೇಕ ಪ್ರಕರಣಗಳಲ್ಲಿ ರೈತರು ಸರ್ಕಾರಕ್ಕೆ ಸಲ್ಲಿಸಬೇಕಾದ ಕಂದಾಯವನ್ನು ಪಾವತಿಸದೇ ಇದ್ದಂತಹ ಸಂದರ್ಭದಲ್ಲಿ ಮುಟ್ಟುಗೋಲು ಹಾಕಿಕೊಳಲಾದ ಜಮೀನುಗಳ ಬಾಕಿ ಇರುವ ಮೊಬಲಗನ್ನು ರೈತರು ಸರ್ಕಾರಕ್ಕೆ ಸಂದಾಯ ಮಾಡಿದ ಮೇಲೆ ಪುನಃ ಸದರಿ ಜಮೀನಿನ ಅಧಿಭೋಗದ ಹಕ್ಕನ್ನು ಪುನರ್ ಸ್ಥಾಪಿಸಲು ಕರ್ನಾಟಕ ಭೂ ಕಂದಾಯ ನಿಯಮಗಳು, 1966ರ ನಿಯಮ 119(2)ರಲ್ಲಿ ದಿ: 07.12.2012 ರಿಂದ ದಿನಾಂಕ:06.09.2014ರವರೆಗೆ ಅವಕಾಶ ಕಲ್ಪಿಸಲಾಗಿತ್ತು.<br><br>ಸದರಿ ಅವಧಿಯು ಮುಕ್ತಾಯವಾದ ಹಿನ್ನೆಲೆಯಲ್ಲಿ ಮತ್ತೊಮ್ಮೆ ಕಾಲಾವಕಾಶ ವಿಸ್ತರಿಸುವ ಬಗ್ಗೆ ದಿನಾಂಕ:23.03.2023 ರಂದು ಕರಡು ಅಧಿಸೂಚನೆಯನ್ನು ಹೊರಡಿಸಲಾಗಿದ್ದು, ಅಂತಿಮ ಅಧಿಸೂಚನೆ ಹೊರಡಿಸುವ ಪ್ರಕ್ರಿಯೆ ಸರ್ಕಾರದ ಹಂತದಲ್ಲಿ ಪರಿಶೀಲನೆಯಲ್ಲಿದೆ. |
| ಈ) | ಆರ್.ಟಿ.ಸಿ.ಯಲ್ಲಿ ಸರ್ಕಾರಿ ಬೀಳು ಎಂದು ನಮೂದಾಗಿರುವುದರಿಂದ ಸರ್ಕಾರದ ರಾಜಸ್ವಕ್ಕೆ ನಷ್ಟವಾಗುತ್ತಿರುವ ಮೊತ್ತವೆಷ್ಟು? (ವಿವರ ನೀಡುವುದು) | ಆರ್.ಟಿ.ಸಿ.ಯಲ್ಲಿ ಸರ್ಕಾರಿ ಬೀಳು ಎಂದು ನಮೂದಾಗಿರುವುದರಿಂದ ಕಂದಾಯ ರಾಜಸ್ವಕ್ಕೆ ಉಂಟಾಗಿರುವ ನಷ್ಟದ ಮೊತ್ತ ಒಟ್ಟು ರೂ.72,521/-ಗಳಾಗಿವೆ. |

| ಕ್ರ ಸಂ | ತಾಲ್ಲೂಕು | ವಿಸ್ತೀರ್ಣ (ಹೆಕ್ಟೇರ್-ಏರ್ಸ್) |
|---|---|---|
| 1 | ಬೆಂಗಳೂರು ದಕ್ಷಿಣ | 56-12 |
| 2 | ಬೆಂಗಳೂರು ಪೂರ್ವ | 8-11 |
| 3 | ಆನೇಕಲ್ | 2-95 |
| 4 | ಯಲಹಂಕ | 53-04 |
| 5 | ಬೆಂಗಳೂರು ಉತ್ತರ | 8-46 |
| | ಒಟ್ಟು | **128-68** |

ಸಂಖ್ಯೆ: ಆರ್‌ಡಿ 63 ಎಲ್‌ಜಿಕ್ಯೂ 2023

(ಕೃಷ್ಣ ಬೈರೇಗೌಡ)